


ತಯಾರಾಗುತ್ತಿದ್ದರು. ಊರ ಗೌಡನಾಗಿದ್ದ ಮಲ್ಲಯ್ಯಜ್ಜನ ಮನೆಯ ಬೀದಿಯಲ್ಲಿಯೇ ಸಂತೆ ನಡೆಯುತ್ತಿತ್ತು. ದೊಡ್ಡದಾಗಿದ್ದ ಅವನ ಮನೆಯ ಹಜಾರದ ಕಟ್ಟೆಯ ಮೇಲೂ ವ್ಯಾಪಾರಿಗಳು ಕುಳಿತುಕೊಂಡಿರುತ್ತಿದ್ದರು. ಸ್ಟೀಲ್ ಪಾತ್ರೆ, ಬಟ್ಟೆ ಇತ್ಯಾದಿ ಮಾರುವ ದೊಡ್ಡ ವರ್ತಕರು ಕನ್ನಡ ಬಾರದೇ ಇದ್ದರೂ ಉರ್ದು ಮಿಶ್ರಿತ ಹಿಂದಿಯಲ್ಲಿಯೇ ವ್ಯವಹರಿಸುತ್ತ ತಮ್ಮ ಸರಕಿಗೆ ತಕ್ಕಂತೆ ದೊಡ್ಡ ಜಾಗವನ್ನು ಪಡೆದುಕೊಂಡು ಹಳದಿ ಟಾಲ್ಪಾಲ್ ಹಾಕಿ ಗ್ರಾಹಕರನ್ನ ತಮ್ಮತ್ತ ಸೆಳೆಯುವ ಪ್ರಯತ್ನದಲ್ಲಿ ಕೂಗುತ್ತಿದ್ದರು. ಬೆಳ್ಳಿ ಬಂಗಾರದ ಅಂಗಡಿಗಳಿಗೂ ಆ ದಿನ ಬಿಡುವಿಲ್ಲದ ವ್ಯಾಪಾರ. ಹಲವು ರಂಗುಗಳನ್ನು ಹೊತ್ತು ಕಲಾವಿದ ಚಿತ್ರ ಬಿಡಿಸುವ ಕ್ಯಾನ್ವಾಸಿನಂತೆ ಕಾಣಿಸುತ್ತಿದ್ದ ಕಾರಣಕ್ಕಾಗಿಯೇ ಸಂತೆ ಈಗಲೂ ನೆನಪಾಗುತ್ತದೆ ಎನ್ನಿಸುತ್ತದೆ.

ಸಾದಿಕನ ಹಳದಿ ಟಾಲ್ಪಾಲ್ ಹಾಕಿರುತ್ತಿದ್ದ ಚುರುಮುರಿ, ಸೇವು ಖಾರದ ಅಂಗಡಿ ನನಗೆ ಅಚ್ಚುಮೆಚ್ಚು. ಗೋಣಿಚೀಲಗಳಲ್ಲಿ ದೇವಸ್ಥಾನದ ಗೋಪುರದಂತೆ ಅವನು ಪೇರಿಸಿಡುತ್ತಿದ್ದ ಚುರುಮುರಿಯನ್ನು ನೋಡುತ್ತ, ಅವನ ಕಣ್ಣು ತಪ್ಪಿಸಿ ಒಂದು ಮುಕ್ಕು ಎತ್ತಿಕೊಂಡು ತಿನ್ನುವಾಗ ಬಿಸಿ ಬಿಸಿಯಾಗಿರುತ್ತಿದ್ದ ಚುಮ್ಮುರಿ ಕರಮ್ ಎಂದು ಬಾಯಲ್ಲಿ ಅರಿಯುವಾಗಿನ ಸಂತೃಪ್ತಿ ಜೊಮ್ಯಾಟೊ, ಸ್ವಿಗ್ಗಿಗಳಲ್ಲಿ ಸಿಕ್ಕುವುದಿಲ್ಲ. ಮೈಸೂರು, ಕೊಲ್ಲಾಪುರ, ಬೆಳಗಾವಿ ಚುಮ್ಮುರಿ, ಭಡಂಗ ಎಂಬೆಲ್ಲ ಹಲವು ವಿಧಗಳು ದೊಡ್ಡ ಗೋಣಿಚೀಲದಲ್ಲಿ ಪರ್ವತದ ಆಕಾರದಲ್ಲಿ ರಾಶಿಯಾಗಿ ಕುಳಿತು ಬಿಸಿಲಿಗೆ ಹೊಳೆಯುತ್ತ ಬಾಯಲ್ಲಿ ನೀರುಣಿಸುತ್ತಿದ್ದವು. ಅವುಗಳ ಪಕ್ಕದಲ್ಲಿಯೇ ಬಣ್ಣ ಬಣ್ಣದ ಹಸಿರು, ಕೆಂಪು, ಹಳದಿ ಬಟಾಣಿಯ ಕಾಳುಗಳು, ವಿವಿಧ ಆಕಾರಗಳಲ್ಲಿದ್ದ ಸೇವು, ಬೆಂಡು ಬತ್ತಾಸುಗಳು. ಅಜ್ಜ ‘ಎರಡು ಸೇರು ಬೆಳಗಾವಿ ಚುಮ್ಮುರಿ ಹಾಕಪಾ’ ಎಂದು ಚೀಲದಲ್ಲಿ ಸುರಿದುಕೊಳ್ಳುತ್ತಿರುವಾಗ ಸಾದಿಕನ ಕಣ್ಣು ತಪ್ಪಿಸಿ ಬಟಕಡಲಿಯನ್ನೋ, ಚುಮ್ಮುರಿಯನ್ನೋ ಪಟಕ್ಕನೇ ಎತ್ತಿಕೊಂಡು ಬಾಯಿಗೆ ಹಾಕಿಕೊಂಡರೆ ಆಹಾ..! ಅವನ ಪಕ್ಕ ಕುಳಿತುಕೊಳ್ಳುತ್ತಿದ್ದ ವೀಳ್ಯದೆಲೆ, ಅಡಿಕೆ, ಚಮನ್ ಇತ್ಯಾದಿ ಮಾರುವ ಪಟಪಟಿ ಅಡಿಕೆಪ್ಪ. ಈಗಷ್ಟೇ ನೀರಿನಲ್ಲಿ ತೊಳೆದಿಟ್ಟ ಹಸಿಯಾದ ಹಸಿರು ವೀಳ್ಯದೆಲೆಗಳನ್ನು ನೋಡುತ್ತಿದ್ದರೆ ಕುಡಿ ಮುರಿದು ಬಾಯಿಗೆ ಹಾಕಿಕೊಳ್ಳಬೇಕು ಎನ್ನುವಂತಹ ಹಂಬಲ. ಅಡಿಕೆಪ್ಪನ ಹೆಸರಾಗಲಿ, ಎಲ್ಲಿಂದ ಬರುತ್ತಾನೆಂಬುದಾಗಲಿ ಯಾರಿಗೂ ಗೊತ್ತಿರಲಿಲ್ಲ. ತನ್ನ ಲೂನಾ ಮೇಲೆ ದೊಡ್ಡ ದೊಡ್ಡ ಚೀಲಗಳನ್ನು ಹಾಕಿಕೊಂಡು ಸಂತೆಗೆ ಬರುತ್ತಿದ್ದ. ಎಡಕ್ಕೆ, ಬಲಕ್ಕೆ, ಹಿಂದೆ, ಮುಂದೆ ಹೀಗೆ ಗಾಡಿಯ ಮೇಲೆ ಚೂರೂ ಜಾಗ ಬಿಡದಂತೆ ಚೀಲಗಳನ್ನು ಹೇರುತ್ತಿದ್ದ ಕುಳ್ಳ ದೇಹಾಕಾರದ ಅಡಿಕೆಪ್ಪ ಚೀಲಗಳ ಮಧ್ಯೆ ಬಹುತೇಕ ಮುಚ್ಚಿ ಹೋಗಿರುತ್ತಿದ್ದ. ಅವನ ಗಾಡಿ ಬರುತ್ತಿದ್ದರೆ ದೂರದಿಂದ ಚೀಲಗಳನ್ನು ಹೊತ್ತುಕೊಂಡ ಪ್ರಾಣಿಯೊಂದು ಓಡಿ ಬರುತ್ತಿದೆಯೇನೋ ಎಂದೆನಿಸುತ್ತಿತ್ತು. ಕೆಂಪಡಿಕೆ, ಬಿಳಿಯಡಿಕೆ, ಅಡಿಕೆಯ